ಆ ಕಲೆಯನ್ನು ನೀವು ಮೈಗೂಡಿಸಿಕೊಂಡರೆ ನನಗೆ ಸುಲಭವಾಗುತ್ತದೆ. ಉತ್ತರ ಕೊಡತಕ್ಕಂಥವರು ಸ್ವಲ್ಪ ಸುಧಾರಿಸಿದ್ದಾರೆ. ದಯಮಾಡಿ ನಾಳೆಯಿಂದ ಪ್ರಶ್ನೋತ್ತರದ ವೇಳೆಯಲ್ಲಿ ಪ್ರಶ್ನೆ ಕೇಳತಕ್ಕಂಥವರು ತಯಾರಾಗಿ ಬಂದು ಪ್ರಶ್ನೆಗಳನ್ನು ಕೇಳಬೇಕು. ನೀವು ಪ್ರಶ್ನೋತ್ತರ ವೇಳೆಯಲ್ಲಿ ಭಾಷಣ ಮಾಡಿದರೆ ನಾನು ಮುಂದಿನ ಪ್ರಶ್ನೆ ತೆಗೆದುಕೊಂಡು ಬಿಡುತ್ತೇನೆ. ದಯಮಾಡಿ ಯಾರೂ ಬೇಸರ ಮಾಡಿಕೊಳ್ಳಬೇಡಿ. ಇವತ್ತು ಅನೇಕ ಜನರಿಗೆ ಉಪಪ್ರಶ್ನಗಳಿಗೆ ನಾನು ಅವಕಾಶ ಕೊಡುವುದಕ್ಕಾಗಲಿಲ್ಲ. ಕಾರಣ ಏನೆಂದರೆ ಸಮಯ ಕೆಳೆದುಹೋದುದರಿಂದ ಅವಕಾಶ ಕೊಡಲಿಲ್ಲ. ಆದ್ದರಿಂದ ಎಲ್ಲ ಸದಸ್ಯರೂ ಸಹಕರಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ವೀರಪ್ಪನ್ ವಿಚಾರಕ್ಕೆ ತಾವೇನು ನಿಲುವಳಿ ಸೂಚನೆ ಕೊಟ್ಟಿದ್ದೀರಿ, ಮಾನ್ಯ ಯಡಿಯೂರಪ್ಪನವರೂ ಅದೇ ವಿಚಾರಕ್ಕೆ ನೋಟೀಸ್ ಕೊಟ್ಟಿದ್ದರು. ಆದ್ದರಿಂದ ಈ ಎರಡೂ ಸೂಚನೆಗಳನ್ನು ಕ್ಲಬ್ ಮಾಡಿ ಒಟ್ಟಿಗೆ ಅವಕಾಶ ಮಾಡಿಕೊಡುತ್ತೇನೆ. ಕಾವೇರಿ ವಿಚಾರವನ್ನು ಸೋಮವಾರ ತೆಗೆದುಕೊಳ್ಳೋಣ. ತಾವು ಇವತ್ತು ಮೊದಲು ಪ್ರಸ್ತಾಪ ಮಾಡುತ್ತೀರೋ ಅಥವಾ ವೀರಪ್ಪಮೊಯಿಲಿಯವರು ಮಾಡುತ್ತಾರೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೀರಪ್ಪಮೊಯ್ಲಿಯವರು' ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಿಲುವಳಿ ಸೂಚನೆಯನ್ನು ಅವರು ಕಳುಹಿಸಿದ್ದಾರೆ. ಆ ಸೂಚನೆ ನಮಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೋಡೋಣ.

ನಿಲುವಳಿ ಸೂಚನೆ (ಅನುಮತಿ ಕೋರಿ ಚರ್ಚೆ)

ಕಾಡುಕಳ್ಳ ವೀರಪ್ಪನ್‌ಗೆ ಜೀವದಾನ ಹಾಗೂ ಕ್ಷಮಾದಾನ ನಿರಾಕರಿಸಲಾಯಿತು

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಸ್ವಲ್ಪ ಪ್ರಸ್ತಾಪ ಮಾಡುತ್ತೇನೆ. ಆಮೇಲೆ ಅವರು ಮಾತನಾಡುತ್ತಾರೆ.

ಅಧ್ಯಕ್ಷರು : ಆಗಬಹುದು. ತಾವು ಅನ್ಯಥಾ ಭಾವಿಸಬೇಡಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ ಇಡೀ ನಾಯಕ ಸಮೂಹ ಯಾರಿದ್ದೀರಿ ಅವರಲ್ಲಿ ಹೇಳುವುದೇನೆಂದರೆ ಮಾತನಾಡುವ ವೇಳೆಯಲ್ಲಿ ಸ್ವಲ್ಪ ಸಮಯದ ಕಡೆಗೂ ತಮ್ಮ ಗಮನ ಇರಲಿ ಮತ್ತೆ ರಿಪಿಟಿಷನ್ ಆಗುವುದು ಬೇಡ. ಸಮಯದ ಸಾರ್ಥಕ ಬಳಕೆಯಾಗಲಿ ಎಂದು ತಮ್ಮೆಲ್ಲರಲ್ಲೂ ವಿನಂತಿ ಮಾಡಕೊಳ್ಳುತ್ತೇನೆ. ಈಗ ನಾವು ಪ್ರಾರಂಭ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ತಾವು ಈ ವೀರಪ್ಪನ್‌ನ ವಿಷಯವಾಗಿ....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಏನು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಮುಖ್ಯ ಮಂತ್ರಿಗಳೂ ಸಹಾ ಇಲ್ಲ. ಹೋಂ ಮಿನಿಸ್ಟರ್ ಸಹ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಏನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಕ್ರಿಯಾಲೋಪ ಆಗಿರುವುದು ಏನು ಇದೆ ಎಂದು ನನಗೆ ಅರ್ಥವಾಗಲಿಲ್ಲ ನಾವು ಚರ್ಚೆ ಮಾಡೋಣ.

ಅಧ್ಯಕ್ಷರು :- ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಚರ್ಚೆ ಪ್ರಾರಂಭವಾಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದರ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ?

ಶ್ರೀ ವಾಟಾಳ್ ನಾಗರಾಜ್ :- ಈ ಬಗ್ಗೆ ಚರ್ಚೆ ಪ್ರಾರಂಭ ಆಗಲಿ.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಮೊದಲೇ ಮಾತನಾಡಬೇಕಾಗಿದೆ. ಈ ವೀರಪ್ಪನ್ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಮೊದಲು ನಾನೇಕೆ ಪಾಯಿಂಟ್ ಆಫ್ ಆರ್ಡರ್ ಹೇಳಿದೆ ಎಂದರೆ ನಿನ್ನೆ ಕೂಡ ತಾವು ಹೇಳಿದಿರಿ. ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದೆ ಸಧ್ಯ ಪರಿಸ್ಥಿತಿ ಅಲ್ಲಿ ಸರಿ ಇಲ್ಲ. ಆ 9 ಜನರ ಜೀವಕ್ಕೆ ತೊಂದರೆ ಇದೆ. ಅಂತಹದರ ಬಗ್ಗೆ ಚರ್ಚೆ ಮಾಡಿ ನಾವು ಏನೇನೋ ಮಾತನಾಡಿ ಹೆಚ್ಚು ಕಡಿಮೆ ಆದರೆ ನಾಳೆ ಅವರಿಗೆ ತೊಂದರೆ ಆಗುತ್ತದೆ. ಆದ್ದರಿಂದ ಚರ್ಚೆ ಮಾಡುವುದು ಸಧ್ಯಕ್ಕೆ ಬೇಡ ಎಂಬ ದೃಷ್ಟಿಯಿಂದ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಏನೇನೋ ಮಾತನಾಡಲಿಕ್ಕೆ ಬಂದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೆಚ್ಚು ಕಡಿಮೆ ಮಾತನಾಡಿದರೆ ತೊಂದರೆಯಾಗುತ್ತದೆ. ನಮ್ಮ ಅಭಿಪ್ರಾಯವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾತನಾಡಬೇಕಾದ್ದನ್ನೇ ಮಾತನಾಡತಕ್ಕದ್ದು. ಏನೇನೋ ಮಾತನಾಡತಕ್ಕದ್ದು ಅಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾತನಾಡುವಾಗ ಹೆಚ್ಚು ಕಡಿಮೆ ಮಾತನಾಡಿದರೆ ಅವರ ಜೀವಕ್ಕೆ ಧಕ್ಕೆ ಆಗುತ್ತದೆ. 9 ಜನರ ಜೀವಕ್ಕೆ ಧಕ್ಕೆ ಆಗತಕ್ಕ ಚರ್ಚೆಯನ್ನು ನಾವು ಮಾಡಿ ಅವರನ್ನು ತೊಂದರೆಗೆ ಸಿಕ್ಕಿಸುವುದನ್ನು ತಪ್ಪಿಸಬೇಕು ಎಂಬ ಉದ್ದೇಶ ನಮಗೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಧಕ್ಕೆಗೂ ಸರ್ಕಾರ ಕಾರಣ. 120 ಜನರು ಸತ್ತಿರುವುದಕ್ಕೆ ಸರ್ಕಾರ ಕಾರಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರತಿ ಒಂದಕ್ಕೂ ಸಾರ್ಕಾರವೇಕಾರಣ

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸತ್ತವರು ಸತ್ತಿದ್ದಾರೆ. ಇಲ್ಲ ಎಂದು ಹೇಳುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಗುರುಪಾದಪ್ಪನವರೇ ಒಂದು ನಿಮಿಷ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆವರೇನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ ಅದರಲ್ಲಿ ಏನೂ ತಿರುಳಿಲ್ಲ, ಹುರುಳಿಲ್ಲ, ಏಕೆಂದರೆ ಪಾಯಿಂಟ್ ಆಫ್ ಆರ್ಡರ್ ಸ್ಪೆಸಿಫಿಕ್ ವಿಚಾರದ ಬಗ್ಗೆ..

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚರ್ಚೆ ಮಾಡಬಾರದು ಎಂದು ಹೇಳಿತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆಮಾಡಬಾರದು ಎಂದು ಯಾವ ರೂಲ್‌ನಲ್ಲಿದೆ ಹೇಳಿ? ಆಮೇಲೆ ನಮಗೂ ಕೂಡ ಜವಾಬ್ದಾರಿ ಇದೆ. ಪತ್ರಿಕೆಯಲ್ಲಿ ಕೂಡ ಎಲ್ಲ ಡೀಟೆಲ್ಸ್ ಬಂದಿದೆ. ಆದ್ದರಿಂದ ನಿಮಗೆಷ್ಟು ಜವಾಬ್ದಾರಿ ಇದೆಯೋ ನಮಗೂ ಕೂಡ ಅಷ್ಟೇ ಜವಾಬ್ದಾರಿ ಇದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ (ಸಾರಿಗೆ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಚರ್ಚೆ ಮಾಡುವುದರ ಬಗ್ಗೆ ಸರ್ಕಾರದ ವಿರೋಧವಾಗಲಿ ಅಥವಾ ಚರ್ಚೆ ಮಾಡಬಾರದು ಎನ್ನುವ ಉದ್ದೇಶವಾಗಲಿ ಖಂಡಿತವಾಗಿಯೂ ಸಹ ಇಲ್ಲ. ಅಂದರೆ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಕ ಮಾಡಲಿಕ್ಕೆ ಬಯಸುತ್ತೇನೆ. ತಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನಾವು ಆ ಕಡೆ ಕುಳಿತಿದ್ದಾಗ ನೀವೇ ಈ ರೀತಿ ಒಂದು ಸಾರಿ ಮನವಿ ಮಾಡಿದ್ದೀರಿ. ಇಲ್ಲ ನಾವು ಇವತ್ತು ಚರ್ಚೆ ಮಾಡುವುದು ಬೇಡ ಎಂದು ಮನವಿ ಮಾಡಿದ್ದೀರಿ. ನಮಗೆ ಬಂದಿರತಕ್ಕ ಅಂದರೆ ಸರ್ಕಾರಕ್ಕೆ ಬಂದಿರತಕ್ಕ ಮಾಹಿತಿ ಪ್ರಕಾರ, ಆಡಳಿತ ಯಂತ್ರದ ಮಾಹಿತಿ ಪ್ರಕಾರ ಇವತ್ತು ಮತ್ತು ನಾಳೆ ಸ್ವಲ್ಪ ಕ್ರೂಷಿಯಲ್ ಆಗಿದೆ. ಶುಕ್ರವಾರ, ಶನಿವಾರ, ಭಾನುವಾರ ಆದರೆ ಸೋಮವಾರ ಇದರ ಬಗ್ಗೆ ಚರ್ಚೆ ಮಾಡುವುದರ ಬಗ್ಗೆ ತಮ್ಮದೇನೂ ತಕರಾರು ಇಲ್ಲ. ಆಗುವುದೇ ಇಲ್ಲ ಎಂದು ಮನವರಿಕೆ ಆದ ನಂತರ ಇಲ್ಲಿ ಚರ್ಚೆ ಮಾಡದೇ ನಾವು ಇನ್ನೆಲ್ಲಿ ಚರ್ಚೆ ಮಾಡಬೇಕು? ಈ ರಾಜ್ಯದ ಮಹತ್ವವಾಗಿರತಕ್ಕ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕಂಥದ್ದು ಈ ಸದನ. ಆದರಿಂದಾಗಿ ನಾವ್ಯಾರೂ ಚರ್ಚೆಗೆ ವಿರೋಧ ಇಲ್ಲ. ಇವತ್ತಿನ ಸಂದರ್ಭದಲ್ಲಿ 2-3 ದಿವಸ ನಾವು ಸಮಯವನ್ನು ತೆಗೆದುಕೊಳ್ಳೋಣ ಎನ್ನುವ ಒಂದು ಕಳಕಳಿಯ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾಲ್ಕು ಶರತ್ತುಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಈ ಸದನಕ್ಕೆ ಅಲ್ಲಿ ಗೊತ್ತಿಲ್ಲ. ಆ ಶರತ್ತುಗಳು ಏನು? ಈ ಸದನ ನಡೆಯುವಾಗ ಹೊರಗಡೆ ಶರತ್ತುಗಳನ್ನು ಒಪ್ಪಿದ್ದೇವೆಂದು ಇವತ್ತು ಪತ್ರಿಕೆಯಲ್ಲಿ ಬಂದಿದೆ, ಶರತ್ತುಗಳು ಏನು? ಯಾವ್ಯಾವ ಶರತ್ತು ಎಂದು ನೀವು ಹೇಳಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಕೂಡ ವಿಷಯವನ್ನು ಎಷ್ಟರಮಟ್ಟಿಗೆ ಎಳೆಯ ಬೇಕು ಅಥವಾ ಈಗ ಏನು 9 ಜನರನ್ನು ಹೋಸ್ಟೇಜ್ ಆಗಿ ವೀರಪ್ಪನ್ ಇಟ್ಟುಕೊಂಡಿದ್ದಾನೆ, ಅವರ ಜೀವಕ್ಕೆ ಅಪಾಯ ಆಗಬಾರದು ಎನ್ನತಕ್ಕ ಆತಂಕ, ಅವರಿಗೆ ರಕ್ಷಣೆ ಕೊಡಬೇಕು ಎನ್ನತಕ್ಕ ಭಾವನೆ ನಮಗೂ ಕೂಡ ಇದೆ. ಆದರೆ ಸರ್ಕಾರ ಎಲ್ಲಿ ಎಡವಿದೆ? ಏಕೆಂದರೆ ಪತ್ರಿಕೆಯಲ್ಲಿ ಬಂದಿದೆ. ಈ ಹಿಂದೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನು ಯಾವುದೇ ರೀತಿಯಿಂದ ಪತ್ರ ಬರೆದಿಲ್ಲ ಯಾವುದೇ ಕಂಡೀಷನಗೆ ಒಪ್ಪಿಲ್ಲ ಮತ್ತು ಮಾತುಕತೆಗೆ ಕೂಡ ಮೂರ್ನಾಲ್ಕು ಶರತ್ತುಗಳನ್ನು ಏನು ಹೇಳಿದರು, ಅಷ್ಟಕ್ಕೆ ಮಾತ್ರ ಕರುಣಾನಿಧಿಯವರ ಜೊತೆ ಮಾತನಾಡಿದ್ದೇನೆ ಎನ್ನತಕ್ಕ ಮಾತನ್ನು ಮಾತ್ರ ಇಲ್ಲಿ ಹೇಳಿದರು. ಆದರೆ ತಾವು ಇವತ್ತು ನೋಡಿರಬಹುದು. ಯಾವ್ಯಾವ ಕಂಡೀಷನ್ಸ್‌ಗೆ ಒಪ್ಪಿಕೊಂಡಿದ್ದಾರೆ, ಏನೇನು ಹೇಳಿದ್ದಾರೆ ಎನ್ನತಕ್ಕ ವಿಚಾರ ಬಂದಿದೆ. ಅದಕ್ಕಾಗಿ ಸರ್ಕಾರ ಏನು ಮಾಡಿದೆ? ಅಥವಾ ಸರ್ಕಾರ ಏಕೆ ಇಷ್ಟೊಂದು ಅಲಕ್ಷ ಮಾಡಿತು? ಸರ್ಕಾರದ ಕರ್ತವ್ಯ ಏನು ಇತ್ತು? ನಮ್ಮದೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನದಲ್ಲಿ ಹೇಳಬೇಕಿತ್ತು. ಯಾವ ಮಾತನ್ನು ನೀವು ಪತ್ರಿಕೆಗೆ ಹೇಳಿದಿರಿ ಅಥವಾ ಹೊರಗಡೆ ಬರವಣಿಗೆಯಲ್ಲಿ ಕೊಟ್ಟು ಕಳುಹಿಸಿದಿರಿ, ನಿಮ್ಮ ಬರವಣಿಗೆ ಅಲ್ಲಿ ಪಬ್ಲಿಶ್ ಆಗುತ್ತದೆ. ತಮಿಳುನಾಡಿನಲ್ಲಿ ಪಬ್ಲಿಶ್ ಆಗುತ್ತದೆ. ಆದರೆ ಈ ಸದನಕ್ಕೆ ನೀವು ಹೇಳುವುದಿಲ್ಲ. ನಾವು ಪತ್ರಿಕೆ ಮುಖಾಂತರ ತಿಳಿದುಕೊಳ್ಳಬೇಕು. ಅದಕ್ಕಾಗಿ ನಾವು ಯಾವುದೇ ರೀತಿಯಿಂದ ಆ 9 ಜನರ ಜೀವಕ್ಕೆ ಅಪಾಯ ಆಗತಕ್ಕದ್ದು ಆಗಲಿ ಅಥವಾ ಏನಾದರೂ ತೊಂದರೆ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ನೀವು ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಇಲ್ಲಿಯವರೆಗೆ ಟಾಸ್ಕ್ ಫೋರ್ಸ್ ಎಷ್ಟೊಂದು ಕಷ್ಟಪಟ್ಟು ಕೆಲಸ ಮಾಡಿತ್ತು? ನೀವು ಏನಾದರೂ ಪತ್ರ ಬರೆದಿದ್ದೀರಾ ಎಂದು ಕೇಳಿದ್ದೇವೆ. ಈ ಅಮ್ನೆಸ್ಟಿ ಬಗ್ಗೆ ಅಂತೂ ತಾವು ಡೆಫನಿಷನ್ ಕೊಟ್ಟಿರಿ. ಇವತ್ತು ಕೆಲವು ಪತ್ರಿಕೆಯಲ್ಲಿ ಬಂದಿದೆ. ಮತ್ತು ವೀಕ್‌ನಲ್ಲಿ ಕೂಡ ಅದರ ಡೆಫನಿಷನ್ ಹಾಕಿದ್ದಾರೆ. ಅಂದರೆ ಡಿಕ್ಷನರಿಯಲ್ಲಿ ಅದರ ಅರ್ಥ ಏನು? ಆಮೇಲೆ ಸಿ.ಆರ್.ಪಿನಲ್ಲಿ ಅದರ ಡೆಫನಿಷನ್ ಏನು? ಎಷ್ಟರಮಟ್ಟಿಗೆ ಯಾವ ರೀತಿಯಾಗಿ ಭಾರತದ ರಾಷ್ಟ್ರಪತಿಗಳು ಅಮ್ನೆಸ್ಟಿಯನ್ನು ಗ್ರಾಂಟ್ ಮಾಡಬಹುದು ಎನ್ನತಕ್ಕದ್ದರ ಬಗ್ಗೆ ವಿವರವಾಗಿ ಕೊಟ್ಟಿದ್ದಾನೆ. ಆ ಮಾತು ಬೇರೆ. ಆದರೆ ಇಲ್ಲಿ ನಿನ್ನೆ ನೀವು ಏನು ಹೇಳಿದಿರಿ? ನಾವು ಕೇಳಿದೆವು. ಏನಾದರೂ ಪತ್ರ ಬೆರೆದಿರಾ? ಅಥವಾ ಪತ್ರ ಬರೆದು ಯಾವ್ಯಾವ ಕಂಡೀಷನ್ಸ್‌ಗೆ ತಾವು ಒಪ್ಪಿಕೊಂಡಿರಿ? ಯಾವ ಕಂಡೀಷನ್ ನೀವು ಒಪ್ಪಿಕೊಂಡರೆ ಸೂಕ್ತ? ಅಥವಾ ಯಾವ ಕಂಡೀಷನ್ ಒಪ್ಪಿಕೊಂಡಿದ್ದು ಸರಿ ಇಲ್ಲ ಎನ್ನತಕ್ಕದ್ದನ್ನು ತಿಳಿಸಿ ಎಂದು ನಾವು ಕೇಳಿದೆವು. ಇಲ್ಲಿ ನೀವು ಏನೂ ಹೇಳಲೇ ಇಲ್ಲ. ಅಂದಾಗ ಇವತ್ತು ಕೊನೆಯಪಕ್ಷ ಈ ಸದನಕ್ಕೆ ಇಷ್ಟಾದರೂ ಹಕ್ಕು ಇದೆಯಲ್ಲಾ? ತಾವೇನು ಪತ್ರಗಳನ್ನು ಬರೆದಿರಿ? ಆ ಕಂಡೀಷನ್ಸ್ ಏನು? ಒಪ್ಪಿಕೊಂಡಿದ್ದು ಏನು? ಮತ್ತು ಇವತ್ತು ವೀರಪ್ಪನ್‌ನ್ನು ತಮಿಳುನಾಡಿನ ಜೈಲಿನಲ್ಲಿಯೇ ಇಟ್ಟು ತಾವು ಟ್ರಯಲ್ ಮಾಡುವವರು ಇದ್ದೀರಾ? ಎಲ್ಲಾ ಕೇಸ್ ಗಳನ್ನೂ ಟ್ರಾನ್ಸಫರ್

ಮಾಡುತ್ತಿದ್ದೀರಾ ? ಅಥವಾ ಅವನು ಏನು ಕಾಂಪೆನ್ಸೇಷನ್ ಕೇಳಿದ್ದಾನೆ. ಅಷ್ಟು ಹಣವನ್ನು ಕೊಡುತ್ತಿದ್ದೀರಾ? ಎನ್ನತಕ್ಕದ್ದು ಈ ಸದನಕ್ಕೆ ಗೊತ್ತಿಲ್ಲ ಎಂದರೆ ಮತ್ತೆ ಯಾರಿಗೆ ಗೊತ್ತು? ನಾವು ಎಲ್ಲಿ ಚರ್ಚೆ ಮಾಡುವುದು ? ನಾವು 9 ಜನರಿಗೆ ಇಕ್ಕಟ್ಟಿಗೆ ಸಿಕ್ಕಿಸಬೇಕು ಅಥವಾ ಅವರ ಜೀವಕ್ಕೆ ಹಾನಿ ಮಾಡಬೇಕು ಆ ದೃಷ್ಟಿಯಿಂದ ನಾವಿಲ್ಲಿ ಚರ್ಚೆ ಮಾಡಿದರೆ ಅವರಿಗೆ ತೊಂದರೆ ಆಗುತ್ತದೆ ಎನ್ನುವುದು ನಮಗೂ ಗೊತ್ತಿದೆ. ಆದರೆ ನೀವು ಮಾಡಿದಂತಹ ಕೆಲಸಕ್ಕೆ ನಾವು ಹೇಳಬೇಕೋ ಇಲ್ಲವೋ ಅಧ್ಯಕ್ಷರೇ, ಅದಕ್ಕೆ ತಾವು ಏಲೋ ಮಾಡಿದರೆ ನಾನು ಕೆಲವೊಂದು ಮಾತುಗಳನ್ನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದೆಲ್ಲಾ ವಿಚಾರಗಳನ್ನೂ ಸಹ ನಾವು ಸರ್ಕಾರದವರು ಒಪ್ಪುತ್ತೇವೆ. ಅವರು ನಾವು ಎಲ್ಲರೂ ಸೇರಿಕೊಂಡೇ ಈ ಟಾಸ್ಕ್ ಫೋರ್ಸ್ ಕೆಲಸ ಮಾಡಿದ್ದೇವೆ ಅಥವಾ ಇವತ್ತು 9 ಜನರ ಜೀವ ರಕ್ಷಣೆ ಮಾಡಬೇಕು ಎಂದು ಸರ್ಕಾರಕ್ಕೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಿಮ್ಮೆಲ್ಲರಿಗೂ ಇದೆ. ಅದರ ಬಗ್ಗೆ ನಾವ್ಯಾರೂ ಸಂಶಯ ವ್ಯಕ್ತ ಮಾಡಿಲ್ಲ. ಒಂದೆರಡು ದಿನ ಎಲ್ಲಾ ವಿವರಗಳನ್ನೂ ನಿಮಗೆ ಕೊಡುತ್ತೇವೆ. ನಿಮಗೆ ಕೊಡದೇ ಇನ್ನಾರಿಗೆ ಕೊಡಬೇಕು ನಾವು? ವಿವರಗಳನ್ನು ಕೇಳತಕ್ಕ ಹಕ್ಕು ನಿಮಗೆ ಇದೆ. That is your right. It is our duty to give factual information. ಅದರಲ್ಲೇನೋ ಸಂಶಯ ಇಲ್ಲ. ನಾನು ಸಮಯ ಕೇಳುತ್ತಿದ್ದೇನೆ. ತಾವು ಹಿಂದೆ ಇದೇ ರೀತಿ ಮಾಡಿದ್ದೀರಿ. ಶ್ರೀ ವೀರೇಂದ್ರ ಪಾಟೀಲರೇ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ. ಒಂದೆರಡು ದಿನ ಮುಂದೆ ಹಾಕೋಣ, ಅದರಲ್ಲಿ ಏನೂ ಆಗುವುದಿಲ್ಲ ಎಂದು ಹೇಳಿದ್ದರು. ನಾವು ಆಗ ಅವಕಾಶ ಕೊಟ್ಟಿದ್ದೆವು. ನಾನು ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಸೋಮವಾರ, ಮಂಗಳವಾರದ ಹೊತ್ತಿಗೆ ಪರಿಸ್ಥಿತಿ ಗೊತ್ತಾಗುತ್ತದೆ. ಈಗ ಅದರಲ್ಲಿಯೇ ಫ್ಯಾಕ್ಟುಯಲಿ ನಾವು ಬರೆದಿರತಕ್ಕಪತ್ರಗಳು, ಹೇಳಿರತಕ್ಕ ವಿಚಾರಗಳು. ಇನ್ಯಾವುದನ್ನೂ ನಾವು ತಿರುಚಲಿಕ್ಕೆ ಸಾಧ್ಯವಿಲ್ಲ because we have to deal with him tactfully. ಎನ್ನುವ ಒಂದೇ ಒಂದು ಕಾರಣಕ್ಕಾಗಿ ನಾವು ಅಪೀಲ್ ಮಾಡಿಕೊಳ್ಳುತ್ತಿದ್ದೇವೆ. ತಾವು ದಯಮಾಡಿ ಚರ್ಚೆಯನ್ನು ಮುಂದೂಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಯಾವ ಚೌಕಟ್ಟಿನಲ್ಲಿ ಚರ್ಚೆ ಮಾಡುತ್ತೇವೆ? ಮಾನ್ಯ ಖರ್ಗೆಯವರು ಹೇಳಿದ ಹಾಗೆ ನಮಗೂ ಜವಾಬ್ದಾರಿ ಇದೆ. ಪತ್ರಿಕೆಯಲ್ಲಿ ನೀವು ಏನು ಹೇಳಿದ್ದೀರಿ? ಪತ್ರಿಕೆಯಲ್ಲಿ ಏನು ಬಂದಿದೆ? ತಮಿಳುನಾಡಿನ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಜೀವದಾನ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ಅದೆಲ್ಲಾ ಪ್ರಕ್ರಿಯೆ ಪ್ರಾರಂಭ ಆಗಬೇಕಾಗುತ್ತದೆ. ಆದರೆ ನೀವು ಅವನ ಬೇಡಿಕೆ 4ನ್ನು ಈಡೇರಿಸುತ್ತೇವೆ ಎಂದು ಏನು ಶಬ್ದಗಳನ್ನು ಹೇಳಿದ್ದೀರಿ, ಆ ಹಿನ್ನೆಲೆಯಿಂದ ನಾವು ಜವಾಬ್ದಾರಿಯಿಂದ ಪ್ರಸ್ತಾಪ ಮಾಡದೇ ಇದ್ದರೆ ರಾಜ್ಯದ ಜನರಿಗೆ ಇಂತಹ ಪ್ರಮುಖವಾದಂತಹ ವಿಷಯ ಒಬ್ಬ ನರಹಂತಕನ ವಿಷಯ ಪ್ರಸ್ತಾಪ ಆಗಲಿಲ್ಲ ಎನ್ನುವಂತಹ ಜವಾಬ್ದಾರಿ ನಮ್ಮ ಮೇಲೆ ಬಿದ್ದಿದೆ.

ಅಧ್ಯಕ್ಷರು : ಅವರೇನು ಹೇಳಿದ್ದಾರೆ ಅಂದರೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಚೌಕಟ್ಟು ಮೀರಿ ಹೋಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸೋಮವಾರದ ದಿವಸ ನೀವು ಏನು ಹೇಳಿದರೂ ಸರ್ಕಾರ ಕೇಳುತ್ತದೆ. ನಿಮ್ಮ ಎದುರುಗಡೆ ಎಲ್ಲ ವಿಚಾರಗಳನ್ನು ಹೇಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ 9 ಜನರ ಪ್ರಾಣ ಉಳಿಯಬೇಕು, ಅವರು ಜೀವಂತವಾಗಿ ಬರಬೇಕು ಎನ್ನುವ ಕಳಕಳಿ ನಮಗೆ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸೋಮವಾರ ಆದ ಮೇಲೆ ಅವರು ಮಾತನಾಡಲಿ. ನಾನು ಚರ್ಚೆ ಮಾಡುವುದಕ್ಕೆ ಬೇಡ ಎಂದು ಹೇಳುತ್ತಿಲ್ಲ. ಚರ್ಚೆ ಮಾಡುವುದಕ್ಕೆ ನಾವು ಸಹ ಸಿದ್ದರಿದ್ದೇವೆ. ಎಲ್ಲಾ ವಿವರ ಕೊಡುವುದಕ್ಕೆ ತಯಾರು ಇದ್ದೇವೆ. ಯಾವುದೇ ಮುಚ್ಚುಮರೆ ಇಲ್ಲ. ಮುಚ್ಚು ಮರೆ ಮಾಡಬೇಕು ಎಂದು ನಮ್ಮ ಉದ್ದೇಶ ಇಲ್ಲ, ಸಮಯ ಸರಿಯಾಗಿಲ್ಲ. ಇಂತಹ ಸಮಯದಲ್ಲಿ ನಾವು ಸೋಮವಾರದ ತನಕ ಚರ್ಚೆ ಮಾಡುವುದು ಬೇಡ. ಮಂಗಳವಾರದ ದಿವಸ ಚರ್ಚೆಗೆ ತೆಗೆದುಕೊಳ್ಳೋಣ. ನಾವು ಏನೇನು ಬರೆದಿದ್ದೇವೆ, ತಮಿಳುನಾಡಿಗೆ ಬರೆದಂತಹ ಪತ್ರ, ಅವರ ಜೊತೆ ಮಾತನಾಡಿದಂತಹ ವಿಚಾರ, ಪ್ರತಿ ಒಂದು ವಿಚಾರವನ್ನೂ ಈ ಸಭೆಯ ಮುಂದೆ ಇಡುತ್ತೇವೆ. ಯಾವುದನ್ನೂ ಮುಚ್ಚಿಡುವುದಿಲ್ಲ. ಏಕೆಂದರೆ ಜೀವಕ್ಕೆ ಧಕ್ಕೆ ಆಗುವಂತಹ ಪ್ರಶ್ನೆ ಸೂಕ್ಷ್ಮ ವಿಚಾರ ಇದ್ದಾಗ ನಿಮ್ಮನ್ನು ನಾನು ಕೇಳಿಕೊಳ್ಳುತ್ತಿದ್ದೇವೆ, ಬೇರೆ ಮುಚ್ಚಿಡತಕ್ಕ ಪ್ರಶ್ನೆ ಇಲ್ಲ. ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ಶ್ರೀನಿವಾಸ್ : ಚರ್ಚೆ ಮಾಡುವುದೇ ಬೇಡ, ಇನ್ನೊಂದು ವಾರದಲ್ಲಿ ಅವರನ್ನು ಬಿಡಿಸುತ್ತೀರೋ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಂಗಳವಾರದ ತನಕ ಬಿಡಿಸುವುದಕ್ಕೆ ಆಗಲಿಲ್ಲ ಎಂದರೆ ನಾವಿಲ್ಲಿ ಚರ್ಚೆ ಮಾಡೋಣ. ಇಲ್ಲಿ ಬಿಟ್ಟು ಬೇರೆ ಕಡೆಗೆ ಹೋಗುತ್ತೇವಾ? ನಿಮ್ಮೆದರು ಒಂದೂ ವಿಚಾರ ಮುಚ್ಚಿಡುವುದಿಲ್ಲ. ಎಲ್ಲ ಮುಂದೆ ಇಡುತ್ತೇವೆ.

ಅಧ್ಯಕ್ಷರು : ಅವರೇನು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಸರ್ಕಾರ ಎಷ್ಟು ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ ಆ ಜವಾಬ್ದಾರಿಯಿಂದಲೇ ಅವರು ಹೇಳಿರಬಹುದು, ನಮಗೆ ಮೂರು ದಿವಸ ಅವಕಾಶ ಕೊಡಿ, ಆಮೇಲೆ ಚರ್ಚೆ ಮಾಡಿ ಎಂದು ಹೇಳಿರಬಹುದು. ನಾನು ವಿಷಯದ ಸೂಕ್ಷ್ಮತೆಯನ್ನು ಒಪ್ಪುತ್ತೇನೆ. ಆದರೆ ನಾನು ವಿವರಕ್ಕಂತೂ ಹೋಗುವುದಿಲ್ಲ. ಏಕೆಂದರೆ ಚರ್ಚೆಯನ್ನು ವಿವರವಾಗಿ ಇದರ ಬಗ್ಗೆ ಮಾಡಬಹುದು. ಎಚ್ಚರಿಕೆಯನ್ನು ಕೂಡ ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಅದನ್ನು ನಾವು ಹೇಳತಕ್ಕದ್ದರಲ್ಲಿ ಏನೂ ತಪ್ಪು ಇಲ್ಲ. ಏಕೆಂದರೆ ಇವತ್ತು ಶರಣಾಗತನಾಗಲಿಕ್ಕೆ ಈ ಆಫರ್ ಸರ್ಕಾರ

ಕೊಡತಕ್ಕದ್ದು, ಅವರು ಹೇಳತಕ್ಕದ್ದು, ದಯಮಾಡಿ ಇದು ಹೊಸದಲ್ಲ. 1993 ರಲ್ಲಿ ಈ ಆಫರ್ ಬಂದಿದೆ. 1994ರಲ್ಲಿ ಬಂದಿದೆ. 1996ರಲ್ಲಿ ಕೂಡ ಬಂದಿದೆ. ಆದರೆ ಅದು ಬಂದ ಮೇಲೂ ಸಹ ಅವನು ನಮ್ಮ ಫಾರೆಸ್ಟ್ ಆಫೀಸರ್‌ಗಳನ್ನು ಸಾಕಷ್ಟು ಕೊಂದಿದ್ದಾನೆ. ತಮಿಳುನಾಡಿನ ಪೋಲೀಸ್ ಆಫೀಸರ್ಸ್ ಅನ್ನು ಕೊಂದಿದ್ದಾನೆ. ಗಾರ್ಡ್‌ಗಳನ್ನು ಕೊಂದಿದ್ದಾನೆ. 1994 ರಲ್ಲಿ ಕೂಡ ಮಾಡಿದ್ದಾನೆ. ಆಮೇಲೆ ಕೂಡ ಸತತವಾಗಿ ಈ ಕೃತ್ಯವನ್ನು ನಡೆಸಿಕೊಂಡೇ ಬಂದಿದ್ದಾನೆ. ಇವತ್ತು ನಾವು ಯಾರ ಹತ್ತಿರ ಡೀಲ್ ಮಾಡುತ್ತಿದ್ದೇವೆ ಅದನ್ನು ಸ್ವಲ್ಪ ವಿಚಾರ ಮಾಡಬೇಕು. ಶರಣಾಗತನಾಗುವುದ ಬಹಳ ಒಳ್ಳೆಯದು.

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ಕೇಳುತ್ತಿದ್ದೇನೆ ಎಂದರೆ,

ಶ್ರೀ ಎಂ.ವೀರಪ್ಪ ಮೊಯಿಲಿ : ನಾನು ಆ ಲಿಮಿಟ್ ತಪ್ಪಿ ಹೋಗುವುದಿಲ್ಲ. ಏಕೆಂದರೆ I am conscious of this subject. It is very sensitive.

MR. SPEAKER : I want you to advice me, should we take up this matter today or should we consider the request of the Government.

SRI.M.VEERAPPA MOILY : You may consider the request of the Government. ನಾಳೆ ಅವರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. We are dealing with a certain person and do it very cautiously. ನಾವು ಇಲ್ಲಿ ವಿರೋಧ ಪಕ್ಷದಲ್ಲಿದ್ದುಕೊಂಡು, ವಿಷಯ ತಿಳಿದೂ ಕೂಡ ಚರ್ಚೆ ಮಾಡಿಲ್ಲ ಎಂಬ ಆಕ್ಷೇಪಣೆ ನಾಳೆದಿನ ಬರಬಾರದು. ಏಕೆಂದರೆ 1993-94, 1994-95 ಮತ್ತು 1995-96 ರಲ್ಲಿ ಏನು ನಡೆದುಕೊಂಡು ಬಂದಿದ್ದೇವೆ ಮತ್ತು ನಾವು ಅಯಾಯ ಕಾಲದಲ್ಲಿ ಅಯಾ ಸರ್ಕಾರಗಳು ಆ್ಯಕ್ಟ್ ಮಾಡಿದ್ದು ತಮಿಳುನಾಡಿನಲ್ಲಿ ಕೂಡ ಇಂಥ ಆ್ಯಕ್ಟ್‌ಗಳನ್ನು ಮಾಡಿದ್ದಾರೆ. ಎಲ್ಲರೂ ಕೂಡ ಆಯಾ ಸಂದರ್ಭಗಳಲ್ಲಿ ವೀರಪ್ಪನ್ ಶರಣಾಗತನಾಗುತ್ತಾನೆ ಎಂದು ತಿಳಿದುಕೊಂಡಿದ್ದರು. But you are dealig with a certain person. ಬಹುಶಃ ದೇಶದಲ್ಲಿ Poolan Devei is nothing. She has never killed even a single Forest Officer or Police Officer. But Veerappan More than 100 Crores of rupees worth sandal wood he has looted,and he has killed more than 200 elephants. ಅಧ್ಯಕ್ಷರೆ, ಬಹುಶಃ ಜಗತ್ತಿನಲ್ಲಿ ಇಂಥ ಮನುಷ್ಯ ಸಿಗುವುದಿಲ್ಲ ಅಂಥ ಮನುಷ್ಯನ ಹತ್ತಿರ ನೀವು ಇವತ್ತು ಡೀಲ್ ಮಾಡುತ್ತಿದ್ದೀರಿ. You will have to be extra careful. ಆ ಜವಾಬ್ದಾರಿ ಪೂರ್ತಿ ನೀವು ಹೊರಬೇಕಾಗುತ್ತದೆ. I am telling you. ಆ ತಂತ್ರವನ್ನು ನಮಗೆ ಹೇಳಬೇಕಾಗಿಲ್ಲ, ನಾವು ಕೇಳುವುದೂ ಇಲ್ಲ. ನಿಮ್ಮನ್ನು ಇವೊತ್ತು ಸಂಕಷ್ಟಕ್ಕೆ ಸಿಲುಕಿಸತಕ್ಕಂಥ ಯಾವ ಹೇಳಿಕೆಯನ್ನು ನಮ್ಮ ಕಡೆಯಿಂದ ನಾವು ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ : ನಿಮ್ಮ ಅಭಿಪ್ರಾಯಗಳನ್ನೆಲ್ಲಾ ನಾವು ಗಮನದಲ್ಲಿಟ್ಟು ಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಇಲ್ಲ, ಇಲ್ಲ ಗಮನದಲ್ಲಿಟ್ಟುಕೊಳ್ಳುವುದಿಲ್ಲ ಅದು. It has to be taken seriously. You are dealing with a certain person. It is unparallel in the history of the World and the country. Poolan Devi is nothing at all. ಮಾನ್ಯ ಅಧ್ಯಕ್ಷರೆ ಇವತ್ತಿನ ದಿವಸ ಒಂದು ವಿಚಾರವನ್ನು ನಾನು ಹೇಳುತ್ತೇನೆ. ಇಷ್ಟು ಗಂಭೀರವಾದ ವಿಚಾರದ ಬಗ್ಗೆ ಸರ್ಕಾರದಿಂದ ಬಂದಂಥ ಹೇಳಿಕೆಗಳು, ಸರ್ಕಾರ ನಡೆಸಿಕೊಂಡು ಬಂದಂಥ ರೀತಿ, ಆ ಟಾಸ್ಕ್ ಫೋರ್ಸ್ ಏನಿದೆ ಅದನ್ನು ನಿರ್ವಹಿಸಿದಂಥ ವಿಚಾರ ಬಹಳಷ್ಟು ಇದೆ. ಈಗ ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅದು ಯಾವುದೂ ಕೂಡ ತೃಪ್ತಿಕರವಾಗಿಲ್ಲ ಮತ್ತು ಈ ಸೂಕ್ಷ್ಮ ಪ್ರಕರಣಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವುದಕ್ಕೆ ಸಹಕಾರಿಯಾಗಿಲ್ಲ. ಅನೇಕ ಘಟನೆಗಳು Any mishandling at any stage, not the Question of nine people. ಜನರ ಕಣ್ಣೀರಿನ ಕಥೆ ಇದರಲ್ಲಿದೆ. Victims ಅವರ ಸಂಭಂದಿಕರು ಬರೆದಂಥ ಅನೇಕ ಪತ್ರಗಳು ಹಾಗೂ ದೂರವಾಣಿಗಳು ನಿಮಗೆ ಬಂದಿರಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಮಗೂ ಬಂದಿವೆಯೆ?

SRI M.VEERAPPA MOILY : Please take it seriously. ನಿಮಗೆ ಬಂದಿದೆ ನಮಗೆ ಬಂದಿದೆ ಎಂಬ ಪ್ರಶ್ನೆ ಅಲ್ಲ We are very serious about it. We are concerned about it.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈ ವಿಷಯವನ್ನು ಮಾತನಾಡಬೇಡಿ ಎಂದು ಏತಕ್ಕೆ ಹೇಳುತ್ತೀರಿ? ಇರುವ ಸತ್ಯವನ್ನೇ ಹೇಳಿದ್ದೇನೆ.

SRI M.VEERAPPA MOILY : I don't want any side comments. ಈ ವಿಷಯವಾಗಿ ಸೈಡ್ ಕಾಮೆಂಟ್ಸ್ ಮಾಡಬೇಡಿ. ಇದರಲ್ಲಿ ನಮ್ಮದೂ ಜವಾಬ್ದಾರಿ ಇದೆ, ತಮ್ಮದೂ ಜವಾಬ್ದಾರಿ ಇದೆ. ಈ ವಿಷಯವಾಗಿ ವಿವರವಾಗಿ ಮಾತನಾಡುವುದಕ್ಕೆ ತಾವು ಸೋಮವಾರದವರೆಗೆ ಸಮಯ ತೆಗೆದುಕೊಂಡಿದ್ದರೆ ಆ ಬಗ್ಗೆ ನಾನು ವೈಯಕ್ತಿಕವಾಗಿ ಗಮನಿಸುವುದಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದೆ. ಆ ಬಗ್ಗೆ ನಿಮ್ಮದೇ ಆದ ಸ್ಟ್ಯಾಟಜಿ ಇರುತ್ತದೆ. We will have to leave it to you. ಅದಕ್ಕೆ ನಾವು ಕೈ ಹಾಕಿ ಹಸ್ತಕ್ಷೇಪ ಮಾಡುವ ಪ್ರಶ್ನೆ ಇಲ್ಲ. ಆದರೆ ಈ ಗಂಭೀರತೆಯ ವಿಚಾರದಲ್ಲಿ ಕೆಲವು ಹೇಳಿಕೆಗಳು ಬಂದಿದ್ದು ಸದು ಸರಿಯಲ್ಲ. ಅದರ ಬಗ್ಗೆ ನಾವು ಕಾಮೆಂಟ್ಸ್ ಮಾಡಬೇಕಾಗುತ್ತದೆ. ಆದರೆ ಇವತ್ತು ನಾವು ಕಾಮೆಂಟ್ ಮಾಡವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಇದರ ಬಗ್ಗೆ ಗಂಭೀರವಾದ ಚರ್ಚೆಯಾಗಿ ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳವರೂ ಸೇರಿ ತೀರ್ಮಾನ ತೆಗೆದುಕೊಳ್ಳಬೇಕು. ಕೇವಲ ನಮ್ಮ ಕರ್ನಾಟಕದವರು ಬಹಳ ಪ್ರಾಮಾಣಿಕತೆಯಿಂದ, ಎಚ್ಚರಿಕೆಯಿಂದ ವಿಚಾರ ಮಾಡಿದರೆ ಸಾಲದು, ಎರಡೂ ರಾಜ್ಯಗಳೂ ಸಹ ಅತ್ಯಂತ ಎಚ್ಚರಿಕೆಯಿಂದ ಈ ವಿಚಾರವನ್ನು ನಿರ್ವಹಣೆ ಮಾಡತಕ್ಕಂಥ ಅವಶ್ಯಕತೆ ಖಂಡಿತವಾಗಿಯೂ ಇದೆ. ಆದುದರಿಂದ ಈ ಎಚ್ಚರಿಕೆಯನ್ನು ಮಾತ್ರ ತಮ್ಮ ಮುಖಾಂತರ ಸರ್ಕಾರದ ಮುಂದೆ ಇಡಲಿಕ್ಕೆ ಇಚ್ಛಿಪಡುತ್ತೇನೆ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಸೋಮವಾರದ ನಂತರ ಇದನ್ನು ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀ ವೀರಪ್ಪ ಮೊಯಿಲಿಯವರು ಈಗ ಹೇಳಿದಂಥ ಮಾತನ್ನೇ ನಾನೂ ಹೇಳಬೇಕೆಂದು ಮೊದಲೇ ಅಂದುಕೊಂಡಿದ್ದೆ. ಅದು ಬಹಳ ಎಚ್ಚರಿಕೆಯ ಮಾತು. ಶರಣಾಗತಿ ಎನ್ನುವ ಹೆಸರಿನಲ್ಲಿ ಯಾರಿಗೆ ಯಾರು ಶರಣಾಗತಿಯಾಗುವುದು ಎನ್ನುವ ಪ್ರಶ್ನೆ ಬರುತ್ತದೆ. ಒಂದು ರೀತಿಯಲ್ಲಿ ನಾವು ನಡೆದುಕೊಳ್ಳುತ್ತಿರುವ ರೀತಿನೀತಿಗಳನ್ನು ನೋಡಿದಾಗ ವೀರಪ್ಪನ್‌ಗೆ ಕರ್ನಾಟಕ ಸರ್ಕಾರದ ಸಂಪೂರ್ಣ ಶರಣಾಗತಿ, ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲವೇ ಇಲ್ಲ. ಹಾಗೂ ಪೋಲೀಸರ ಆತ್ಮಹತ್ಯೆ ಇವೆರಡೇ ಪದ. ಇನ್ನು ಮುಂದೆ ನಾನು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ಸದನದಲ್ಲಿ ಯಾವುದನ್ನೂ ಚರ್ಚೆ ನಡೆಸಬಾರದು ಎನ್ನುವ ಗೋಪ್ಯತೆಯನ್ನು ಮೊದಲಿನಿಂದಲೂ ನಾವು ವೀರಪ್ಪನ್ ಬಗ್ಗೆ ಇಟ್ಟುಕೊಂಡು ಬಂದಿದ್ದೇವೆ. ವೀರೇಂದ್ರಪಾಟೀಲ್‌ರ ಸರ್ಕಾರ ಬಂಗಾರಪ್ಪನವರ ಸರ್ಕಾರ, ವೀರಪ್ಪಮೊಯಿಲಿಯವರ ಸರ್ಕಾರ ಹಾಗೂ ದೇವೇಗೌಡರ ಸರ್ಕಾರದಿಂದ ಹಿಡಿದು ಇಲ್ಲಿಯವರೆಗೆ ಗೋಪ್ಯತೆ ಎಂದು ಹೇಳಿಕೊಂಡು ಬುದಿದ್ದೇವೆ ಇನ್ನು ಎರಡು ದಿವಸಗಳಲ್ಲಿ ನಿಮಗೆ ಎಲ್ಲಾ ವಿಚಾರ ತಿಳಿಸುತ್ತೇವೆ. ದಯಮಾಡಿ ಎರಡು ದಿನ ಯಾವ ಹೇಳಿಕೆ ಕೊಡಬೇಡಿ ಎಂದು ಎಲ್ಲಾ ಅರಣ್ಯ ಸಚಿವರು ಮತ್ತು ಗೃಹಸಚಿವರಾಗಿದ್ದಂಥ ಸಿಂಧ್ಯ ಅವರಿಂದ ಹಿಡಿದು ಬಸವಲಿಂಗಪ್ಪನವರು ಅರಣ್ಯ ಸಚಿವರಾಗಿನಿಂದ ಹಿಡಿದು ಈಗಿರುವ ರೋಷನ್ ಬೇಗ್ ರವರೆಗೂ ಎಲ್ಲರ ಬಾಯಲ್ಲೂ ಒಂದೇ ಮಂತ್ರ. ಸ್ವಲ್ಪ ಗೋಪ್ಯ, ಹೆಚ್ಚಾಗಿ ಯಾರೂ ಕೇಳಬಾರದು, ಏನಾದೀತೋ ಎನೋ ಎಂದು ಒಂದು ರೀತಿಯ ಮಂಕುಬೂದಿಯನ್ನೇ ಎರಚಿದ್ದಾರೆ. ಆದರೆ ಈಗ ಅವರೀಗ ಮಂಕುಬೂದಿಯನ್ನು ಎರಚಿ 4 ಷರತ್ತುಗಳಿಗೆ ಸರ್ಕಾರದವರು ನೇರವಾಗಿ ಪತ್ರವನ್ನು ಬರೆದಿದ್ದಾರೆ. ನಮ್ಮಲ್ಲಿರುವ ಕೇಸು, ಕಡತ ಎಲ್ಲವನ್ನು ತಮಿಳುನಾಡಿಗೆ ರೈಲ್‌ನಲ್ಲಿ ನಾವು ಕಳುಹಿಸುತ್ತಿದ್ದೇವೆ. ಇದರಿಂದ ನಮಗೆ ಏನೂ ಉಳಿದಿಲ್ಲ. ಈಗ ನಮ್ಮ ರಾಜ್ಯದಲ್ಲಿ ನಾವು ಅವನ ಬಗ್ಗೆ ಕೇಳುವುದಕ್ಕೂ ಒಂದು ಶಕ್ತಿ ಉಳಿದಿಲ್ಲ. ಆ ಶಕ್ತಿಯನ್ನು ಕಳೆದುಕೊಂಡವರು ನಾವು. 46 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದೇವೆ, 120 ಜನರನ್ನೂ200 ಆನೆಗಳನ್ನೂ ಕೂಡ ಕಳೆದುಕೊಂಡಿದ್ದೇವೆ, ನಾಗರೀಕರಿಗೆ ಭಯಭೀತಿ ಉಂಟಾಯಿತು, ಅನೇಕ ಮಂದಿ ಪೊಲೀಸರ ಮತ್ತು ಅರಣ್ಯ ಅಧಿಕಾರಿಗಳ ಧರ್ಮ ಪತ್ನಿಯರು ವಿಧವೆಯರಾದರು. ಅವರ ಕಣ್ಣೀರಿನ ಕಥೆ ಅಷ್ಟಿಷ್ಟಲ್ಲ. ಇಂಥ ಪರಿಸ್ಥಿತಿ ಬಂದಾಗ ಈ ವಿಷಯವನ್ನು ನಾವು ಈ ಸದನದಲ್ಲಿ ಅತ್ಯಂತ ಗೋಪ್ಯವಾಗಿ ಇಟ್ಟಿದ್ದೇವೆ. ಇನ್ನು ಎರಡು ದಿನ ಮಂಗಳವಾರದವರೆಗೆ ನೋಡಿ ಎಂದು ಒಂದು ಕಡೆ ಹೇಳುತ್ತೀರಿ, ಮತ್ತೊಂದು ಕಡೆ ನಿಮ್ಮ ಕ್ಯಾಸೆಟ್‌ಗಳ ಹಾಗು ಪ್ರೇಮಪತ್ರಗಳ ವಿನಿಮಯ ವೀರಪ್ಪನ್ ಜೊತೆಯಲ್ಲಿ ಆಗುತ್ತಿದೆ. ಇದೇನಾದರೂ ಉಂಟೆ ನಮಗನ್ನಿಸುತ್ತದೆ ನಿಜವಾಗಿಯೂ ಬೇರೆ ರಾಜ್ಯದಲ್ಲಿ ಅಥವಾ ಬೇರೆ ದೇಶದಲ್ಲಿ ಈ ರೀತಿ ಆಗಿದ್ದರೆ ಅರಣ್ಯ ಸಚಿವರು ಮತ್ತು ಗೃಹಸಚಿವರು ನಾವು ಅಕ್ಷಮ್ಯ ಅಪರಾಧ ಮಾಡಿದ್ದೇವೆ ಎಂದು ಹೇಳಿ ಮನೆಗೆ ಹೋಗಬೇಕಾಗಿತ್ತು. ಅಂಥದ್ದರಲ್ಲಿ ಇಲ್ಲಿ ಬಿಂದು ಇನ್ನು ಎರಡು ದಿನ ಚರ್ಚೆ ಮಾಡುವುದು ಬೇಡವೆಂದು ಹೇಳುವುದು ಸರಿಯಲ್ಲ. ಆದುದರಿಂದ ತಮ್ಮ ಮಾತಿಗೆ ಬೆಲೆ ಕೊಟ್ಟಿದ್ದರೆ ಕನಿಷ್ಠ ಈ ವಿರೋಧ ಪಕ್ಷದ ಮುಖಂಡರ ಜೊತೆಯಲ್ಲಿ ಚರ್ಚೆ ಆಗುವುದರೊಳಗಾಗಿ ಸರ್ಕಾರದವರು ಏನೇನು ಮಾಡಿದ್ದೀರಿ ಎಂದು ಇವೊತ್ತಿನ ಸಂಜೆಯೊಳಗೆ ಹೇಳಿ. ನಿಮ್ಮ ಹಣೆಬರಹ ಏನೆಂಬುದನ್ನಾದರೂ ಹೇಳಿ. ನೀವು ಅದನ್ನೂ ಹೇಳದೆ ಗೌಪ್ಯವಾಗಿಟ್ಟು ಕೊಂಡು ಮಾಡುವುದಾದರೆ ಇದು ಒಳ್ಳೆಯದಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವೀರಪ್ಪ ಮೊಯಿಯವರು ತಮ್ಮ ಹಿರಿಯ ಅನುಭವದ ಮೂಲಕ ಹೇಳಿದಂಥ ಮಾತುಗಳಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇಲ್ಲಿರತಕ್ಕಂಥದ್ದು ಒಬ್ಬ ಕುಖ್ಯಾತ ವ್ಯಕ್ತಿಯ ವಿಷಯದಲ್ಲಿ ನಾವಾದರೂ ಯಾವುದೇ ಸರ್ಕಾರವಾದರೂ ಅದಕ್ಕೆ ಒಪ್ಪುವುದಿಲ್ಲ. ಅದಕ್ಕೆ ತೆಗೆದುಕೊಳ್ಳಬೇಕಾಗಿರತಕ್ಕಂಥ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ಕೈಗೊಳ್ಳಬೇಕಾಗುತ್ತದೆ. ಈ ವಿಷಯ ಈಗ ಬಹಳ ಸೂಕ್ಷ್ಮ ಘಟ್ಟದಲ್ಲಿದೆ. ಈಗ ನಮ್ಮ ಮುಂದೆ ಇರತಕ್ಕಂತ ಸಮಸ್ಯೆ 9 ಜನ ಒತ್ತೆಯಾಳುಗಳನ್ನು ಉಳಿಸಿಕೊಳ್ಳ ಬೇಕಾದ ವಿಷಯದಲ್ಲಿ ಈಗಾಗಲೇ ಪ್ರಸ್ತಾಪ ನಡೆದಿದೆ. ಗೋಪಾಲನ್‌ರವರು ಅರಣ್ಯ ಪ್ರವೇಶ ಕೂಡ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ವಿವರಗಳನ್ನೂ ನಾವು ಹೇಳಿದರೆ ಆ ಮಾತಿನ ಧಾಟಿಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರೆ ಅವರ ಜೀವಕ್ಕೆ ಅಪಾಯವಾಗಬಹುದು ಎಂಬ ಒಂದೇ ಒಂದು ಕಾತುರವಿದೆಯೇ ವಿನಃ ಅವನನ್ನು ಉಳಿಸಿಕೊಳ್ಳಬೇಕು ಅಥವಾ ಇನ್ನೇನೋ ಮಾಡಬೇಕು ಎನ್ನುವಂಥದ್ದಾಗಲಿ ಅಥವಾ ಕಾನೂನಿನ ಚೌಕಟ್ಟನ್ನು ಮೀರಿ ಈ ಸರ್ಕಾರ ನಡೆಸಬೇಕು ಎನ್ನುವಂಥಾದ್ದೇನೂ ಇಲ್ಲ. ಆದುದರಿಂದ ಮಾನ್ಯ ವೀರಪ್ಪಮೊಯಿಲಿಯವರು ನಮಗೆ ಎಚ್ಚರ ನೀಡಿದಂತೆ ಮತ್ತು ತಾವು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದಂತೆ ನಮ್ಮ ವಿರೋಧ ಪಕ್ಷದ ನಾಯಕರನ್ನು ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರನ್ನು, ಶ್ರೀ ಯಡಿಯೂರಪ್ಪ ಅವರನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ. ದಯವಿಟ್ಟು ಸೋಮವಾರ ಅಥವಾ ಮಂಗಳವಾರದ ದಿವಸ ನಾವು ಅಂತಿಮವಾಗಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾದ ವಿವರಗಳನ್ನು ಈ ಸದನದಲ್ಲಿ ಕೊಡುತ್ತೇವೆ. ಅಂತಿಮವಾಗಿ ಈ ಸದನವೇ ಸಾರ್ವಭೌಮ. ಇಲ್ಲಿ ಮುಚ್ಚಿಡಬೇಕಾದ ಅಗತ್ಯವೇನೂ ಇಲ್ಲ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಆರೋಗ್ಯ ಸ್ವಲ್ಪಮಟ್ಟಿಗೆ ಸರಿಯಾಗಿಲ್ಲದೆ ಇರುವುದರಿಂದ ದಯಮಾಡಿ ಇವತ್ತು ಸಾಯಂಕಾಲ ಅಥವಾ ನಾಳೆ ಬೆಳಿಗ್ಗೆ ನಿಮ್ಮನ್ನೆಲ್ಲಾ ಕರೆಯಿಸಿ ಮಾತನಾಡಿ ಕೆಲವು ವಿಚಾರಗಳನ್ನು ನಿಮ್ಮ ಬಳಿ ಪ್ರಸ್ತಾಪ ಮಾಡುವುದಕ್ಕೆ ವೈಯಕ್ತಿಕವಾಗಿ ಮೂರು ನಾಲ್ಕು ಜನ ಹಿರಿಯ ಮುಖಂಡರನ್ನು ಕರೆದು ಮಾತನಾಡತಕ್ಕಂಥ ಒಂದು ಸಲಹೆಯನ್ನು ತಾವು ಕೊಟ್ಟಿದ್ದೀರಿ. ಅದರ ಬಗ್ಗೆ ಅವರೂ ಮಾತನಾಡುವುದಕ್ಕೆ ತಯಾರಿದ್ದಾರೆ. ದಯವಿಟ್ಟು ಇದರ ಬಗ್ಗೆ ಮಂಗಳವಾರದ ದಿವಸ ತಾವು ಹೇಳಿದಂತೆ ಚರ್ಚೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಮ್ಮದು ಒಂದೇ ಅಭಿಪ್ರಾಯ. ನೀವೇನೂ ಚರ್ಚೆಯನ್ನು ಮಾಡಬೇಡಿ. ಸೂಕ್ಷ್ಮ ಡೀಟೇಲ್ಸ್ ಕೊಡಬೇಕೆಂದರೆ ತೊಂದರೆಯಾಗುತ್ತದೆ. ಏಕೆಂದರೆ ಅವನು ಗಡುವು ಕೊಟ್ಟಿದ್ದಾನೆ. ಆ ಗಡುವು ಮೀರುವವರೆಗೆ ಚರ್ಚೆ ಮಾಡದಿದ್ದರೂ ಒಂದು ಮಾತನ್ನಾದರೂ ಈ ಸದನಕ್ಕೆ ತಿಳಿಸಬಹುದಲ್ಲ. ನೀವು ಏನು ಪತ್ರ ಬರೆದಿರಿ ಆ ಪತ್ರದ ಕಂಟೆಂಟ್ಸ್ ಏನು ಎಂಬುದನ್ನಾದರೂ ತಾವು ಓದಿ ಹೇಳಬಹುದಲ್ಲವೆ. ನಾವು ಇವತ್ತು ಪತ್ರಿಕೆಯಲ್ಲಿ ಓದಿನೋಡಿ ತಿಳಿದುಕೊಂಡಿದ್ದೇವೆ. ಇದನ್ನು ಯಾರೂ ಗೌಪ್ಯವಾಗಿ ಇಟ್ಟುಕೊಂಡಿಲ್ಲ. ತಮಿಳುನಾಡಿನವರು ಒಪ್ಪಿದ್ದಾರೆ ಎಂದು ಪತ್ರಿಕೆಯಲ್ಲಿ ಹೇಳಿದ್ದಾರೆ. ಗೋಪಾಲನ್ ಅವರು ಏನು ಹೇಳಿದ್ದಾರೆ, ನೀವು ಏನು ಹೇಳಿದ್ದೀರಿ ಅದನ್ನೂ ಅವರು ಹೇಳಿಕೊಂಡಿದ್ದಾರೆ. ಔಟ್‌ಸೈಡ್ ಏನಿದೆ ಅದನ್ನು ಬಹಿರಂಗಪಡಿಸಿ. ಹೊರಗಡೆ

ಹೇಳುತ್ತಿದ್ದೀರಿ, ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದೀರಿ ಅಥವಾ ಯಾರಾದರೂ ಪತ್ರಿಕಾ ಮಿತ್ರರು ಕೇಳಿದಾಗ ಹೇಳುತ್ತೀರಿ. ಸದನದಲ್ಲಿ ನಾವು ಕೇಳಿದರೆ ಈ ಮಾತನ್ನು ನೀವು ಹೇಳುತ್ತಿಲ್ಲ. ಒಂದು ವೇಳೆ ಡೀಟೇಲ್ ಸ್ಟ್ಯಾಟಜಿ ಹೇಳದಿದ್ದರೂ ರೈಟಿಂಗ್‌ನಲ್ಲಿ ಕೊಟ್ಟಿದ್ದನ್ನಾದರೂ ಸದನಕ್ಕೆ ತಿಳಿಸಿದರೆ ನಮಗೆ, ಸಭಾಧ್ಯಕ್ಷರಿಗೆ ಮತ್ತು ಇಲ್ಲಿರುವ ಸದಸ್ಯರಿಗಾದರೂ ಗೊತ್ತಾಗುತ್ತದೆ. ಇಲ್ಲದಿದ್ದರೆ ಈಗಾಗಲೆ 100 ಕೋಟಿ ರೂಪಾಯಿ ಮೌಲ್ಯದ ಶ್ರೀಗಂಧ ಮತ್ತಿತರ ವಸ್ತುಗಳ ರೂಪದಲ್ಲಿ ಅವನು ಏನು ಲೂಟಿ ಮಾಡಿದ್ದಾನೆ ಇಲ್ಲಿಯವರೆಗೆ ಅದಕ್ಕಾಗಿ ಸರ್ಕಾರ ಖರ್ಚು ಮಾಡಿರುವುದನ್ನು ನೋಡಿದರೆ. ಟಾಸ್ಕ್ ಫೋರ್ಸ್‌ಗಾಗಿ ಮಾಡಿದ ವೆಚ್ಚವೂ ಸೇರಿದಂತೆ 35 ಕೋಟಿ ರೂಪಾಯಿ ಆಗಿದೆ. ಇನ್ನೂ ಮುಂದೆ ಎಷ್ಟಾಗುತ್ತದೆ ಎಂಬುದನ್ನು ನೋಡೋಣ. ಕನಿಷ್ಠ ಯಾವ ಯಾವ ಷರತ್ತಿಗೆ ಒಪ್ಪಿಕೊಂಡು ನೀವು ಪತ್ರ ಬರೆದ್ದೀರಿ ಅದನ್ನಾದರೂ ತಿಳಿಸಿ. ಅಥವಾ ಅವನ್ನು ಒಪ್ಪಿಕೊಂಡದ್ದು ಸರಿಯೆ, ತಪ್ಪೇ ಎನ್ನುವ ಬಗ್ಗೆ ಚರ್ಚೆ ಮಾಡುವುದು ಬೇಡ. What you have written to them, atleast that should be known. That is a document.

12.00 ಪಿ.ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಮತ್ತು ಸರ್ಕಾರದ ಮಾತು ಕೇಳಿ ತಾವು ಮೂರು ದಿನ ಮುಂದೂಡುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ. ಅವರದಷ್ಟೆ ಕಳಕಳಿ ನಮಗೂ ಇದೆ. ಆದರೆ ಈ ವಿಷಯ ಯಾವಾಗ ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಕ್ರೈಸಿಸ್ ಬಂದಾಗ ತೆಗೆದುಕೊಳ್ಳುತ್ತೇವೆ. ಬೇರೆ ಸಮಯದಲ್ಲಿ ಬಿಗಿ ಬಂದೋಬಸ್ತ್ ಮಾಡುವುದಿಲ್ಲ. 40 ಕೋಟಿ ಖರ್ಚು ಮಾಡಾಯಿತು, 120 ಜನರನ್ನು ಮುಗಿಸಿಯಾಯಿತು. ಬಿಎಸ್‌ಎಫ್ ಅನ್ನು ಯಾವ ಆಧಾರದ ಮೇಲೆ ಕಳಿಸಿದಿರಿ, ಏಕೆ ವಾಪಸ್ ತೆಗೆದುಕೊಂಡಿರಿ? ಅಂದರೆ ಆ ಸುತ್ತಮುತ್ತ ಜನರ ಜೀವದ ಜೊತೆ ಚೆಲ್ಲಾಟ ಮಾಡುತ್ತಿದ್ದೇವೆ. ಈ ತರಹ ಕ್ರೈಸಿಸ್ ಬಂದಾಗ, ಸ್ವಲ್ಪ ಟೈಂ ಕೊಡಿ, ಹಿಂದೆ ಸಿಂಧ್ಯಾ ಅವರು ಹೋಂ ಮಿನಿಸ್ಟರಾಗಿದ್ದಾಗ ಸಂಜೆಯೊಳಗೆ ಎಲ್ಲ ಮುಗಿದೇ ಹೋಯಿತು ಇನ್ನೇನು ಹಿಡಿದೇಬಿಡುತ್ತೇವೆ ಎನ್ನುವ ರೀತಿಯಲ್ಲಿ ಇಲ್ಲಿ ಚರ್ಚೆ ನಡೆಯಿತು. ಆದ್ದಿಂದ ಎರಡು ಮೂರು ದಿನ ತಡೆದು ಚರ್ಚೆ ಮಾಡಲು ಸಿದ್ಧವಿದ್ದೇವೆ. ಆದರೆ ಯಾವ ವಿಷಯಗಳು ಪತ್ರಿಕೆಯಲ್ಲಿ ಬರಬಾರದೋ ಅವೆಲ್ಲ ಬಂದಾಗ ಏನೂ ಉಳಿದಿಲ್ಲ. ನೀವು ಹೇಳಿದರೆ ನಾವು ತಡೆದುಕೊಳ್ಳುತ್ತೇವೆ. ಆದರೆ ಅವನು ಹಿಡಿದಿರುವವರು ಜೀವಂತವಾಗಿ ಬರುತ್ತಾರೆ ಎಂದು ನೀವು ಗ್ಯಾರಂಟಿ ಕೊಡುತ್ತೀರಾ ನಮ್ಮ ಅರಣ್ಯ ಸಚಿವರನ್ನಾದರೂ ಕಳಿಸಿಕೊಡಿ ಸಾರ್, ಸೇಫಾಗಿ ಬರಲಿ, ಅದರ ಬಗ್ಗೆ ಮಂತ್ರಿಮಂಡಲದಲ್ಲಿ ಚರ್ಚೆಯಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಪತ್ರ ಬರೆದಿದ್ದೀರಿ ತಾನೇ? 4 ಷರತ್ತುಗಳು ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಪತ್ರ ಬರೆದದ್ದು ನಿಜ, ಸಾಹೇಬರು ಇವತ್ತು ಸಂಜೆ ನಿಮ್ಮನ್ನೆಲ್ಲ ಕರೆಯಿಸಿ ಮಾತನಾಡಿ ತೋರಿಸುತ್ತಾರೆ.

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೇ ವಿನಂತಿಮಾಡಿಕೊಳ್ಳುತ್ತೇನೆ. ನಿಯಮ 60ರ ಕೆಳಗೆ ಈ ವಿಚಾರವನ್ನು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಮಾಡಬೇಕೆಂದು ವಿರೋಧ ಪಕ್ಷದ ಎಲ್ಲಾ ಪ್ರಮುಖ

ಮುಖಂಡರೂ ನನ್ನಲ್ಲಿ ಮನವಿ ಸಲ್ಲಿಸಿದ್ದಿರಿ. ಪ್ರಾಸ್ತಾವಿಕ ಮನವಿಗೆ ತಮಗೆ ಅವಕಾಶ ಕೊಡಬೇಕೆಂದು ನಾನು ಹೇಳುವ ಹಂತದಲ್ಲಿ ಸರ್ಕಾರ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಚರ್ಚೆಯಲ್ಲಿ ನನ್ನ ಮನಸ್ಸಿಗೆ ಎರಡು ಪ್ರಮುಖ ಅಂಶಗಳು ಬಂದವು. ಸಾರ್ವತ್ರಿಕವಾಗಿ ಗೊತ್ತಾಗುತ್ತಿರುವ ಮಾಹಿತಿ ಸದನಕ್ಕೆ ಲಭ್ಯವಾಗುತ್ತಿಲ್ಲ, ಸದನ ಅಧಿವೇಶನದಲ್ಲಿದ್ದಾಗಲೂ ಈ ತರಹ ಆಗುವುದು ಎಲ್ಲೋ ಒಂದು ಕಡೆ ಸದನವನ್ನು ಅಲಕ್ಷ್ಯ ಮಾಡಿದಂತಾಗುತ್ತದೆ ಮತ್ತು ಪ್ರಮುಖವಾಗಿ ವಿರೋಧ ಪಕ್ಷದಲ್ಲಿರುವವರು ಈ ವಿಷಯವಾಗಿ ಯಾವುದೇ ಕಾಳಜಿ ವಹಿಸುತ್ತಿಲ್ಲ ಎಂಬ ಅಭಿಪ್ರಾಯ ಹೊರಗಡೆ ಜನರಿಗೆ ಬರುತ್ತೇನೋ ಎಂಬ ಅನುಮಾನ ತಾವು ವ್ಯಕ್ತಪಡಿಸಿದ್ದೀರಿ. ಸ್ವಲ್ಪಮಟ್ಟಿಗೆ ಆ ಅನುಮಾನ ಸತ್ಯ ಇದೆ, ಆ ರೀತಿ ಅವಕಾಶ ಕೊಡಬಾರದೆಂಬುದನ್ನೂ ನಾನು ಒಪ್ಪುತ್ತೇನೆ. ಆದರೆ ಇನ್ನೊಂದು ಅಭಿಪ್ರಾಯವನ್ನು ತಾವು ವ್ಯಕ್ತಪಡಿಸಿದಿರಿ. ವಾಟಾಳರು ಹೇಳುವಂತೆ ಸತತವಾಗಿ ಆಗಿಂದಾಗ್ಗೆ ಇಂತಹ ಪ್ರಸಂಗ ಉದ್ಭವವಾಗುತ್ತಿದೆ. ಸೌಜನ್ಯತೆ ನೆಪದಲ್ಲಿ ಚರ್ಚೆ ಮುಂದೂಡುವಂತಹ ಸಂಪ್ರದಾಯ ಮೂಡಿಬಂದುಬಿಟ್ಟರೆ, ಇದು ನಿರಂತರವಾಗಿ ನಡೆದಿದೆ, ಇದು ಹೀಗಾಗಬಾರದು ಎಂತಲೂ ಹೇಳಿದ್ದೀರಿ. ಸರ್ಕಾರ ಉತ್ತರಿಸುವಾಗ ಬಹಳ ಖಚಿತವಾಗಿ ಹೇಳಿದೆ. ಒಂದು ಕ್ರುಶಿಯಲ್ ಸ್ಟೇಜ್‌ಗೆ ರೀಚಾಗಿದ್ದೇವೆ ಮಂಗಳವಾರದವರೆಗೆ ಮಾತ್ರ ಟೈಂ ಕೊಡಿ ಎಂದು. ನಿಮ್ಮ ಅನುಭವ, ನಿಮಗೆ ಮನಸಿನಲ್ಲಿ ಉದ್ಭವಿಸಿರುವ ಅನುಮಾನ ಮತ್ತು ಸರ್ಕಾರದ ಮಾತು ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ನಾನು ಈಗೊಂದು ತೀರ್ಮಾನಕ್ಕೆ ಬಂದಿದ್ದೇನೆ. ಮಂಗಳವಾರದ ವೇಳೆಗೆ ಪರಿಸ್ಥಿತಿ ಹಾಗಾಗಬಹುದು ಹೀಗಾಗಬಹುದು ಮತ್ತೆ ಮಂಗಳವಾರ ಅವರು ಅಡ್ಜರ್ನ್‌ಮೆಂಟಿಗೆ ಡೇಟ್ ಕೇಳುವ ಹಾಗಿಲ್ಲ. ಮಂಗಳವಾರ ಈ ವಿಷಯವನ್ನು ಖಚಿತವಾಗಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವೆ. ಯಾರ್ಯಾರ ಹಣೆಬರಹ ಏನಿದ್ದರೆ ಅದಕ್ಕೆ ನಾವು ಕಾರಣ ಕರ್ತರಾಗುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ, ಜನರ ವಾರಸುದಾರರೆಲ್ಲ ಇಲ್ಲಿರುವುದರಿಂದ ಇದು ಸದನದಲ್ಲಿ ಚರ್ಚೆ ಆಗಲಿಕ್ಕೇ ಬೇಕು. ಈ ತೀರ್ಪು ಅಂತಿಮ. ನನ್ನ ಮಾತಿಗೆ ಮನ್ನಣೆ ಕೊಟ್ಟು ಮೂಂದೂಡುವುದಕ್ಕೆ ಒಪ್ಪಿಕೊಂಡಿದ್ದಕ್ಕೆ ತಮಗೆ ನನ್ನ ಧನ್ಯವಾದಗಳು. ಸರ್ಕಾರಕ್ಕೂ ನಾನು ಹೇಳುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಸಂಗ್ರಹಣೆ ಮಾಡಿಕೊಂಡು ತಾವೂ ಸಿದ್ಧರಾಗಿರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಂದೆ ಎಸ್‌ಟಿಎಫ್‌ನ ಕಮಾಂಡರ್‌ಇನ್‌ಚೀಫ್ ಆಗಿ ಅವರನ್ನೇ ಕಳಿಸಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು : ನೀವು ಹೈದರಾಬಾದ್ ಕರ್ನಾಟಕದವರು, ನಿಮಗೆ ಆ ಬಗ್ಗೆ ನಂಬಿಕೆ ಇದ್ದರೆ ನಮದೇನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು. ಅಧ್ಯಕ್ಷರು ಹೇಳಿದ್ದಕ್ಕೆ ನಮಗೆ ಒಪ್ಪಿಗೆ ಇದೆ. ಸಾರ, ತಾವು ಒಪ್ಪುವುದಾದರೆ, ಸೋಮವಾರಕ್ಕೆ ಕಾವೇರಿ ಪ್ರಾಧಿಕಾರ ರಚನೆ ಮಾಡಿರುವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕೆಂದು ಏನಿದ್ದೆವು ಇವತ್ತು.....

ಅಧ್ಯಕ್ಷರು : ಅದನ್ನು ಸೋಮವಾರ ತೆಗೆದುಕೊಳ್ಳುತ್ತೇವೆ. ಈಗ ಶೂನ್ಯವೇಳೆ. ರುಕ್ಮಯ್ಯ ಪೂಜಾರ್ - ಆಬ್ಸೆಂಟ್. ಆಮೇಲೆ ತೆಗೆದುಕೊಳ್ಳುತ್ತೇನೆ. ಶ್ರೀರಾಮರೆಡ್ಡಿ - ಅವರೂ ಹೊರಕ್ಕೆ ಹೋಗಿದ್ದಾರೆ.